# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಪ್ ಸಿ ನ್ಯಾಯಾಲಯ, ಆಳಂದ

## ಸಿ.ಸಿ. ನಂ. 396/2015

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಆಳಂದ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು 1. ಅಂಬಣ್ಣಾ ತಂ/ ಕಾಳಪ್ಪಾ ಚೌಡೇಕರ,
ವಯಸ್ಸುಃ 63 ವರ್ಷ, ಸಾಃ ಸಾಯಿಭಗವತಿ ವೆಂಕಟೇಶ ನಗರ ಸ್ಟೇಶನ ಏರಿಯಾ ಗುಲಬರ್ಗಾ.

2. ವಿಕಾಸರಾವ ತಂದೆ ವೇಕಟೇಶ ಕುಲಕರ್ಣಿ,
ವಯಸ್ಸುಃ 53 ವರ್ಷ, ಸಾಃ ಸಹಾಯಕ ಇಂಜಿನಿಯರ ಕಚೇರಿ ನೀರಾವರಿ ಇಲಾಖೆ ಹುಮನಾಬಾದ ಜಿಃಬೀದರ

3. ಗೋಪಾಲ ಅಗ್ನಿಹೋತ್ರಿ,
ವಯಸ್ಸುಃ 67 ವರ್ಷ, ಸಾಃ ಮನೆ ನಂ. 33/94 ರಾಘವೆಂದ್ರ ಲೆರೆಟೆಡ ಮೇನ ರೋಡ ಸುರಪುರ ಜಿಲ್ಲಾಃ ಯಾದಗೀರ-Abated

4. ದಿ. ಶರಣಪ್ಪಾ ತಂದೆ ಅಣ್ಣಾರಾವ ಹಂಗರಗಿ,
ವಯಸ್ಸುಃ 50 ವರ್ಷ, ಸಾಃ ಮನೆ ನಂಬರ 11/45/21 ಡಿ ವೆಂಕಟೇಶ್ವರ ಕಾಲೋನಿ ಗುಲಬರ್ಗಾ (ಮೃತ ಪಟ್ಟಿರುತ್ತಾರೆ)
As per charge sheet.

### ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ

**ಪ್ರಶ್ನೆ 1** ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ಮತ್ತು 2 ನೇ ಆರೋಪಿತರು. ಕೇಳಿರುತ್ತೇವೆ

**ಪ್ರಶ್ನೆ 2.** ಸಿ.ಡಬ್ಲೂ. 1. ಪಿ.ಡಬ್ಲೂ. 1 ಲಕ್ಷ್ಮಣ ತಂದೆ ಮೋತಿಲಾಲ ನಾಯಕ ಅವರು ತಮ್ಮ ನುಡಿ ಸಾಕ್ಷಿಯಲ್ಲಿ 1995 ರಿಂದ 2000 ರದ ಇಸ್ವಿಯವರೆಗೆ ಸ್ಟಾಪಗಳ ಸ್ಯಾಲರಿ ಬಿಲ್ಲಗಳಲ್ಲಿ ಮತ್ತು ಟಿಎ ಬಿಲ್ಲಗಳಲ್ಲಿ ವ್ಯತ್ಯಾಸವಾಗಿದೆ ಟೋಕನಗಳನ್ನು ನೀಡಿದ್ದಾರೆ ಎಂದು ಅಡಿಟ ವರದಿ ಪ್ರಕಾರ ನಮಗೆ ಗೊತ್ತಾಯಿತು. ನನಗೆ ಕಾರ್ಯನಿರ್ವಾಹಕ ಅಭಿಯಂತರರು ಸರ್ಕಾರದ ಕಾರ್ಯದರ್ಶಿಗಳು ನೀರಾವರಿ ನಿಗಮ

ಇವರು ನನಗೆ ಪಿರ್ಯಾದಿ ನೀಡಲು ಆದೇಶಿಸಿದ ಮೇರೆಗೆ ನಾನು ನಿಂಬರ್ಗಾ ಪೋಲಿಸ ಠಾಣೆಗೆ ಹೋಗಿ ಪಿರ್ಯಾದಿಯನ್ನು ನೀಡಿದೆನು ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

**ಪ್ರಶ್ನೇ 3** ಃ ಸಿ.ಡಬ್ಲೂ.4. ಪಿ. ಡಬ್ಲ್ಯು. 2, ಮಲ್ಲಪ್ಪಾ ತಂದೆ ಹೊನ್ನಪ್ಪ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಲೆಕ್ಕ ಪರಿಶೋಧನ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ನನ್ನ ಮೇಲಾಧಿಕಾರಿಗಳು ನನಗೆ ಅಮರ್ಜಾ ಅಣ್ಣೆಕಟ್ಟಿನ ಕೊರಳ್ಳಿ ಉಪವಿಭಾಗದ ಎಲ್ಲ ಕಡತಗಳನ್ನು ಲೆಕ್ಕ ಪರಿಶೋಧನೆ ಮಾಡಲು ಆದೇಶ ನೀಡಿದರು. ಅವರ ಆದೇಶದಂತೆ ಲೆಕ್ಕ ಪರಿಶೋಧನೆ ಮಾಡಲು ಆರಂಭಿಸಿದೆನು 1996 ರಿಂದ 2006 ರವರಗೆ ಸದರಿ ಅಮರ್ಜಾ ಅಣ್ಣೆಕಟ್ಟು ಪಿ.ಡಬ್ಲ್ಯೂ.ಡಿ ರವರ ನೇತೃತ್ವದಲ್ಲಿ ಇತ್ತು. ತದನಂತರ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರವಾಯಿತು. ನಾನು ಲೆಕ್ಕ ಪರಿಶೋಧನೆಯನ್ನು 1996 ರಿಂದ 2000 ರವರಿಗೆ ಲೆಕ್ಕ ಪರಿಶೋಧನೆ ಮಾಡಿರುತ್ತೇನೆ. ಸದರಿ ಲೆಕ್ಕ ಪರಿಶೋಧನೆ ಮಾಡುವ ಸಂದರ್ಭದಲ್ಲಿ ಸದರಿ ಅಣ್ಣೆಕಟ್ಟು ಪಿ.ಡಬ್ಲ್ಯೂ.ಡಿ ರವರ ನೇತೃತ್ವದಲ್ಲಿ ಇತ್ತು. ಆ ಇಲಾಖೆಯಲ್ಲಿ ಸದರಿ 1995 ರಿಂದ 2000 ಇಸ್ವಿಯವರೆಗೆ ಎ.ಕೆ.ಚೌಡಕರ ಅನ್ನುವರು ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಅದರಂತೆ ಆರೋಪಿ ನಂ.೨ ರವರು 17.07.2000 ರಿಂದ 2010 ರವರಗೆ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದರಂತೆ ಆರೋಪಿ.ನಂ.೩ ರವರು ಏಪ್ರಿಲ್ 2000 ದಿಂದ 2001 ರವರೆಗೆ ಇನ್ ಚಾರ್ಜ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಅದರಂತೆ ಆರೋಪಿ ನಂ.೪ ರವರು 1991 ರಿಂದ 2008 ರವರಗೆ ಎಸ್.ಡಿ.ಎ ಎಂದು ಸದರಿ ಇಲಾಖೆಯಲ್ಲಿ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುತ್ತೀದ್ದರು.

ಸದರಿ ಇಲಾಖೆಯ ಎಲ್ಲ ಜವಾಬ್ದಾರಿಯು ಆರಿಟಿಕಲ್ ೧೫ ರ ಪ್ರಕಾರ ಎ.ಇ.ಇ ರವರಿಗೆ ಇರುತ್ತದೆ. ಸದರಿ ಎ.ಇ.ಇ ರವರು ಅರಿಟಿಕಲ್ 343 ರ ಪ್ರಕಾರ ೩ ಬಿಲ್ ಗಳನ್ನು ಟೆಜುರಿಗೆ ಕಳಿಸಿರುತ್ತಾರೆ. ಪ್ರೋಸಿಜರ ಪ್ರಕಾರ ಟೆಜುರಿರವರು ಒಂದು ಟೋಕನ್ನು ಕೊಡುತ್ತಾರೆ ಆ ಟೋಕನ್ನು ಪಡೆದುಕೊಂಡು ಎಸ.ಬಿ.ಆಯ್ ಬ್ಯಾಂಕನಲ್ಲಿ ನೀಡಿದರೆ ಹಣವನ್ನು ಬ್ಯಾಂಕನವರು ಸಂದಾಯ ಮಾಡುತ್ತಾರೆ. ಸದರು ಹಣವನ್ನು ಪಡೆದನಂತರ ಎ.ಇ.ಇ ರವರು ಅದನ್ನು ದಿಸ್ ಪ್ರೇಸ್ ಮಾಡಬೇಕಾಗುತ್ತದೆ. ಆದರೆ ಆರೋಪಿ ನಂ.೧ ರಿಂದ ೩ ರವರು ಅವರವರ ಕೆಲಸದ ಸಮಯದಲ್ಲಿ ಆರೋಪಿ ನಂ೪ ರವರಿಗೆ ಸದರಿ ಕೆಲಸವನ್ನು ಮಾಡಲು ಹೇಳುತ್ತಾರೆ. ಸದರಿ ಎ.ಇ.ಇ ರವರು ಆಫೀಸ್ ಆಡರ್-ರೆಜಿಸ್ಟರ, ಪೇ-ಬಿಲ್ಲ ರಜಿಸ್ಟರ, ಸಂಬಳ ರಜಿಸ್ಟರ, ಅರಿಯರಸ್ ಟಿ.ಎ ಅಡವಾನ್ಸ ಕ್ಯಾಟಿಜನಸ್ ಬಿಲ್ಲ ಇವುಗಳನ್ನು ತಯಾರಿಸಿ ಟೆಜುರಿಗೆ ಕಳುಹಿಸಿ ಚೆಕ್ ಪಡೆದು ಬ್ಯಾಂಕನಿಂದ ಹಣವನ್ನು ಪಡದು ತಂದು ವಿತರಣೆ ಮಾಡುವ ಬಗ್ಗೆ ಎಸ್,ಡಿ,ಎ ಆದ ಆರೋಪಿ ನಂ. ೪ ರವರಿಗೆ ಕರ್ತವ್ಯ ನಿರ್ವಹಣೆ ಒಪ್ಪಿಸಿದ್ದು ಇರುತ್ತದೆ. ಅದರ ಪ್ರಕಾರ ಸದರು ಆರೋಪಿ ನಂ.೪ 1994 ರಿಂದ 2000 ರವಗೆ ನೌಕರರ ಸಂಬಳ ಹಬ್ಬದ ಮುಂಗಡ ಹಣ ರವಾಸ ಭತ್ಯೆ ಇತರ ತುಟ್ಟಿ ಭತ್ಯೆಗೆ ಸಂಬಂದಿಸಿದಂತೆ ನಕಲಿ ಬಿಲ್ ಗಳನ್ನು ಮಾಡಿಕೊಂಡರು ಅಳಂದ ಉಪಠಾಣೆಗೆ ಸಲ್ಲಿಸಿ ಅಲ್ಲಿಂದ ಚೆಕ್ ಪಡೆದು ಎಸ್.ಪಿ.ಆಯ್ ಆಳಂದದಲ್ಲಿ ಸಲ್ಲಿಸಿ

ಹಣವನ್ನು ಹಂತ ಹಂತವಾಗಿ ಪಡೆದುಕೊಂಡಿರುತ್ತಾರೆ. ನಾವು ಲೆಕ್ಕ ಪರಿಶೋಧನೆ ಮಾಡಿದಾಗ ಸುಮಾರು ರೂ.32,78,000/- ಗಳಷ್ಟು ವ್ಯತ್ಯಾಸವಾಗಿರುತ್ತದೆ. ಸುಮಾರು 169 ಟೋಕಗಳನ್ನು ಬಳಸಿದ್ದು ಇರುತ್ತದೆ. ನಾವು ಲೆಕ್ಕ ಪರಿಶೋಧನೆ ಮಾಡುವಾಗ ತಕರಾರು ಹಾಕಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

**ಪ್ರಶ್ನೆ 4-** ಸಿ.ಡಬ್ಲ್ಯೂ.10, ಪಿ. ಡಬ್ಲ್ಯೂ. 4 ಶಿವಶರಣಪ್ಪಾ ತಂದೆ ಬಸವಂತಪ್ಪಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 26-06-2014 ರಂದು ಚಾಸಾ 14 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿಃ 27-06-2014 ರಂದು ಚಾಸಾ 4 ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿಃ 28-06-2014 ರಂದು ಚಾಸಾ 5 ಮತ್ತು 6 ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ನಂತರ ಮರಳಿ ಚಾಸಾ 14 ರವರಿಗೆ ಈ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತೇನೆ ಎಂದು, ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

**ಪ್ರಶ್ನೆ 5-** ಸಿ.ಡಬ್ಲ್ಯೂ.13, ಪಿ.ಡಬ್ಲ್ಯೂ.5 ಮಹಾದೇವ ತಂದೆ ಜಂಬಯ್ಯಾ ಪಂಚಮುಖಿ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 03-10-2013 ರಂದು ಈ ಪ್ರಕರಣದ ಕಡತವನ್ನು ಆಳಂದ ಪೋಲಿಸ್ ಠಾಣೆ ಪಿ.ಎಸ್.ಐ. ರವಿಕುಮಾರ ಧರ್ಮಟ್ಟಿ ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿ.೨೦.೦೧.೨೦೧೪ ರಂದು ಆಡಿಟ್ ವರದಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ಅಡಿಟ್ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಆಡಿಟೆ ವರದಿಯನ್ನು ನಿಪಿ-೨ ಎಂದು ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು. ಅದೇ ದಿನ ಸರಕಾರದ ಕಚೇರಿಯಿಂದ ಮೆಮೊರೆಂಡಮನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡನು. ಸಾಕ್ಷಿ ಸದರಿ ಮೆಮೊರೆಂಡಮನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೩ ಎಂದು ಸಹಿಯನ್ನು ನಿಪಿ-೩(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿ ನಂ.೪ ರವರ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿ ಸದರಿ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೪ ಎಂದು ಸಹಿಯನ್ನು ನಿಪಿ-೮(ಎ) ಎಂದು ಗುರುತಿಸಲಾಯಿತು. ಪತ್ರಾಂಕಿತ ಉಪಖಜಾನೆ ಅಧಿಕಾರಿ ನಾವು ಕೇಳಿರುವ ದಾಖಲಾತಿಗಳನ್ನು ಸಲ್ಲಿಸಲು ಸಮಯಾವಕಾಶ ಕೋರಿ ನೀಡಿರುವ ಪತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡನು ಸಾಕ್ಷಿ ಸದರಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಮಿ೫ ಎಂದು ಸಹಿಯನ್ನು ನಿಪಿ-೫(ಎ) ಎಂದು ಗುರುತಿಸಲಾಯಿತು. ಹಿರಿಯ

ಶ್ರೇಣಿ ದಿವಾಣಿ ನ್ಯಾಯಾಲಯದ ಮುಂದೆ ಇರುವ ಓ.ಎಸ್.ನಂ. 80/2011 ರ ವಾದ ಪತ್ರದ ದೃಡೀಕೃತ ನಕಲನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡನು ಸಾಕ್ಷಿ ಸದರಿ ಧೃಢೀಕೃತ ಪ್ರತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ. 6 ಎಂದು ಸಹಿಯನ್ನು ನಿಪಿ. 6(ಎ) ಎಂದು ಗುರುತಿಸಲಾಯಿತು. ದಿಃ 26-06-2014 ರಂದು ಈ ಪ್ರಕರಣದಲ್ಲಿ ಚಾಸಾ-೧೦ ರವರನ್ನು ಚಾಸಾ-೪ ರಿಂದ ೬ ರವರ ಹೇಳಿಕೆಗಳನ್ನು ಪಡೆದುಕೊಳ್ಳಲು ನೇಮಕ ಮಾಡಿ ಅವರು ಕೆಲಸ ಮಾಡುವ ಸ್ಥಳಕ್ಕೆ ಕಳಿಸಿರುತ್ತೇನೆ. ಅವರು ತೆಗೆದುಕೊಂಡು ಬಂದ ಹೇಳಿಕೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ದಿನಾಂಕ 01-07-2014 ರಂದು ಎಸ್.ಬಿ.ಹೆಚ್. ಬ್ಯಾಂಕಿನವರಿಗೆ ಪತ್ರದ ಮೂಲಕ ಚೆಕ್ಕು ಮತ್ತು ಟೋಕನ್ ನಂಬರಗಳನ್ನು ನೀಡಿ ಎಂದು ಕೇಳಿದಾಗ ಅವರು ಖಜಾನೆಗೆ ರವಾನೆಯಾಗಿದ್ದಾನೆ ಎಂದು ಹಿಂಬರಹವನ್ನು ನೀಡಿರುತ್ತಾರೆ. ಸದರಿ ಹಿಂಬರಹದಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಹಿಂಬರಹವನ್ನು ನಿಪಿ-7 ಎಂದು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಆರೋಪಿ ನಂ.೨ ರವರ ವಿರುದ್ಧ ದೋಷಾರೋಪಣೆ ಪತ್ರ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ಪರವಾನಿಗೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡನು. ಸಾಕ್ಷಿಯು ಸದರಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪತ್ರವನ್ನು ನಿಪಿ-೮ ಎಂದು ಸಹಿಯನ್ನು ನಿಪಿ-೮(ಎ) ಎಂದು ಗುರುತಿಸಲಾಯಿತು. ಡಿ.೨೪.೦೪.೨೦೧೫ ರಂದು ಖಜಾನ ಅಧಿಕಾರಿಗಳಿಂದ ಟೋಕನ್ ನಂಬರುಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಸಾಕ್ಷಿಯು ಸದರಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪತ್ರವನ್ನು ನಿಪಿ-೯ ಎಂದು ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡ ಕಾರಣ ಕಡತಗಳೆಲ್ಲವನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಇದ್ದ ಕಾರಣ ದಿ.೨೫.೦೪.೨೦೧೫ ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

**ಪ್ರಶ್ನೆ 6-** ಸಿ.ಡಬ್ಲೂ.12, ಪಿ.ಡಬ್ಲೂ.06 ವಿಜಯಕುಮಾರ ತಂದೆ ರಾಮಣ್ಣಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿನಾಂಕ: ೧೨.೬.೨೦೧೧ ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಈ ಪ್ರಕರಣವು ನಿಂಬರ್ಗಾ ಠಾಣೆಯ ಪ್ರಕರಣ ಸಂಖ್ಯೆ ೬೮/೨೦೧೧ ಯ ಫಿರ್ಯಾದಿ, ಫಿರ್ಯಾದಿಯ ಪುರವಣಿ ಹೇಳಿಕೆ ಮತ್ತು ಪ್ರ.ವ.ವ ಗಳು ಮತ್ತು ಗುನ್ನಾ ಪಂಚನಾಮೆಗಳು ನಮ್ಮ ಠಾಣೆಗೆ ವರ್ಗಾವಣೆ ಆದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೧೪೦/೨೦೧೧ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಪ್ರ.ವ.ವ.ದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೧೦ ಎಂದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-೧೦(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-೧೦ ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

**ಪ್ರಶ್ನೆ 7-** ಸಿ.ಡಬ್ಲೂ.11, ಪಿ.ಡಬ್ಲೂ.07 ಅಸ್ಲಂಮಭಾಷಾ ತಂದೆ ಮೈಹಿಬೂಬಪೀರಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿ. 16-05-2011 ರಂದು ರಾತ್ರಿ 9.00 ಗಂಟೆಗೆ ಚಾಸಾ-1 ರವರು ಒಂದು ಗಣಕೀಕೃತ ಪಿರ್ಯಾಧಿಯನ್ನು ನೀಡಿದ್ದು, ಆ ಪಿರ್ಯಾಧಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 68/2011 ನ್ನು ತಯಾರಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-11 ಎಂದು, ಸಾಕ್ಷಿಯು ಸಹಿಯನ್ನು ನಿಪಿ. 11-ಎ ಎಂದು ಗುರುತಿಸಲಾಯಿತು.

ದಿನಾಂಕ 17-05-2011 ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಗುನ್ನಾ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಕೈಗೊಂಡು ನಂತರ ದಿಃ 18-05-2011 ರಂದು ಠಾಣಾ ಸರಹದ್ದಿನ ಆಧಾರದ ಮೇಲೆ ಆಳಂದ ಪೋಲಿಸ್ ಠಾಣೆ ದೂರನ್ನು ವರ್ಗಾಯಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ?

ಉತ್ತರಃ 1 ಮತ್ತು 2 ನೇ ಆರೋಪಿತರು. ಸುಳ್ಳು

ಪ್ರಶ್ನೆ 8- ನೀವು ಏನನ್ನಾದರೂ ಹೇಳ ಬಯಸುವೀರಾ?
ಉತ್ತರಃ 1 ಮತ್ತು 2 ನೇ ಆರೋಪಿತರು. ದಾಖಲೆಗಳನ್ನು ಸಲ್ಲಿಸುತ್ತಾರೆ.

ಪ್ರಶ್ನೆ 9- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?
ಉತ್ತರಃ 1 ಮತ್ತು 2 ನೇ ಆರೋಪಿತರು. ಇಲ್ಲಾ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ.